XII ಶ್ರೀ ಕೆ. ಬಿ. ಶಾಣಪ್ಪ (ಅಬಕಾರಿ ಮಂತ್ರಿ) ಅವರು :- ಅಧ್ಯಕ್ಷರು,

1965 ನೇ ಇಸವಿಯ ಕರ್ನಾಟಕ ಅಬಕಾರಿ ಅಧಿನಿಯಮದ 71(4) ನೇ ಕಲಮಿನ ಮೇರೆಗೆ ;

1) 1965 ರ ಕರ್ನಾಟಕ ಅಬಕಾರಿ (ದ್ರಾಕ್ಷಿಯಿಂದ ವೈನ್ ತಯಾರಿಸುವಿಕೆ) ನಿಯಮಕ್ಕೆ ತಿದ್ದುಪಡಿ ತಂದಿರುವ ಸಂಬಂಧದಲ್ಲಿ ದಿನಾಂಕ 29-6-1996 ರಂದು ಹೊರಡಿಸಲಾದ ಎಫ್‌ಡಿ 12 ಪಿಇಎಸ್ 95 (1) ನೇ ಕ್ರಮಾಂಕದ ಅಧಿಸೂಚನೆ ;

2) 1967ರ ಕರ್ನಾಟಕ ಅಬಕಾರಿ (ಬ್ರಿವರಿ) ನಿಯಮಕ್ಕೆ ತಿದ್ದುಪಡಿ ತಂದಿರುವ ಸಂಬಂಧದಲ್ಲಿ ದಿನಾಂಕ 29-6-1996 ರಂದು ಹೊರಡಿಸಲಾದ ಎಫ್‌ಡಿ 12 ಪಿಇಎಸ್ 95 (2) ನೇ ಕ್ರಮಾಂಕದ ಅಧಿಸೂಚನೆ ;

3) 1967 ರ ಕರ್ನಾಟಕ ಅಬಕಾರಿ (ಡಿಸ್ಟಿಲರಿ ಮತ್ತು ವೇರ್‌ಹೌಸ್) ನಿಯಮಕ್ಕೆ ತಿದ್ದುಪಡಿ ತಂದಿರುವ ಸಂಬಂಧದಲ್ಲಿ ದಿನಾಂಕ 29-6-1996 ರಂದು ಹೊರಡಿಸಲಾದ ಎಫ್‌ಡಿ 12 ಪಿಇಎಸ್ 95 (3) ನೇ ಕ್ರಮಾಂಕದ ಅಧಿಸೂಚನೆ ;

4) 1968 ರ ಕರ್ನಾಟಕ ಅಬಕಾರಿ (ದೇಶೀಯ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಕ್ಕೆ ತಿದ್ದುಪಡಿ ಮಾಡಿರುವ ಸಂಬಂಧದಲ್ಲಿ ದಿನಾಂಕ 29-6-1996 ರಂದು ಹೊರಡಿಸಲಾದ ಎಫ್‌ಡಿ 12 ಪಿಇಎಸ್ 95(4) ನೇ ಕ್ರಮಾಂಕದ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

ಅಧ್ಯಕ್ಷರು :- ಕಾಗದ ಪತ್ರಗಳನ್ನು ಮಂಡಿಸಲಾಯಿತು ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಮಲ್ಲಿಕಾರ್ಜುನ ಖರ್ಗೆಯವರು ಆಲಮಟ್ಟಿ ವಿಚಾರದಲ್ಲಿ ಪ್ರಸ್ತಾಪ ಮಾಡುವುದಕ್ಕೆ ನನ್ನನ್ನು ಅನುಮತಿ ಕೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ :- ನಾನು ತಮ್ಮಲ್ಲಿ ಮನವಿ ಮಾಡುತ್ತಿದ್ದೇನೆ, ನಾನು ಸ್ವಲ್ಪ ತಡವಾಗಿ ಬಂದೆ ತಮಗೆ ಕೇಳುವುದಕ್ಕೆ ಆಗಲಿಲ್ಲ. ನಾನು 11-00 ಗಂಟೆಗೆ ಸಭೆ ಇರುವುದು ಎಂದು ತಿಳಿದು ತಡವಾಗಿ ಬಂದಿದ್ದೇನೆ. ಈ ಸಂದರ್ಭದಲ್ಲಿ ನನಗೂ ತಾವು ಆಲಮಟ್ಟಿ, ಜುರಾಲ ವಿಷಯದಲ್ಲಿ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡ ಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು :- ಆಯಿತು, ಈಗ ಚರ್ಚೆ ಇಲ್ಲ ತಾವು ಎರಡೆರಡು ನಿಮಿಷ ದಲ್ಲಿ ಪ್ರಸ್ತಾಪ ಮಾಡಿ, ಇದು ಶೂನ್ಯ ವೇಳೆ ಇದಕ್ಕೆ ಸರ್ಕಾರ ಉತ್ತರ ಕೊಡುತ್ತದೆ.

4. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ :- ಆಲಮಟ್ಟಿ ಡ್ಯಾಂ ಎತ್ತರಿಸುವ ಬಗ್ಗೆ.

+ ಶ್ರೀ ಬಿ. ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) :- ಸನ್ಮಾನ್ಯ ಅಧ್ಯಕ್ಷರೇ, ಆಲಮಟ್ಟಿ ಅಣೆಕಟ್ಟು ನಿರ್ಮಾಣದ ಬಗ್ಗೆ ಯಥಾ ಸ್ಥಿತಿ ಮುಂದುವರೆಸಿಕೊಂಡು ಹೋಗುವಂತೆ ಆಂಧ್ರಪ್ರದೇಶದ ಉಚ್ಚ ನ್ಯಾಯಾಲಯದವರು ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಿದ್ದಾರೆಂದು ತಿಳಿದುಬಂದಿದೆ. The Centre has asked to issue directive to the State of Andhra Pradesh to maintain statusquo.

"The orders were passed by the Bench comprising Chief Justice P.S. Mishra and Justice Syed Sadatuallah Hussaini, in a writ petition filed by Mr. R. Krishnaiah, president of the Andhra Pradesh Backward classes welfare Association". ಸನ್ಮಾನ್ಯ ಅಧ್ಯಕ್ಷರೇ, ಇದರಲ್ಲಿ ಬಹಳ ಸ್ಪಷ್ಟವಾಗಿ ಆಂಧ್ರ ಪ್ರದೇಶ ಉಚ್ಚ ನ್ಯಾಯಾಲಯ ಕೇಂದ್ರ ಸರ್ಕಾರಕ್ಕೆ ಒಂದು ನಿರ್ದೇಶನ ಕೊಟ್ಟು ಈ ತಿಂಗಳ 30 ರವರೆಗೆ ಒಂದು ಅಬ್ಜೆಕ್ಷನ್‌ನನ್ನೂ ತಾವು ಹಾಕಬೇಕು, ಅಲ್ಲಿಯ ವರೆವಿಗೆ ಆಲಮಟ್ಟಿ ಡ್ಯಾಮ್‌ನ ನಿರ್ಮಾಣದ ಯಥಾಸ್ಥಿತಿಯನ್ನು ಮುಂದುವರೆಸಿಕೊಂಡು ಹೋಗಬೇಕೆಂದು ಆದೇಶ ಕೊಟ್ಟಿರುವ ಬಗ್ಗೆ ಎಲ್ಲಾ ನಮ್ಮ ಸರ್ಕಾರಕ್ಕೆ ಆಂಧ್ರ ಪ್ರದೇಶ್ ಹೈಕೋರ್ಟ್‌ನಿಂದ ಏನಾದರೂ ನೋಟೀಸ್ ಬಂದಿತ್ತೇ? ಬಂದಿದ್ದರೆ ತಾವೇನಾದರೂ ಪಿಟಿಶನ್ ಫೈಲ್ ಮಾಡಿದ್ದೀರಾ? ಅಥವಾ ಆ ರೀತಿ ಅವರು ಮಾಡಬಹುದು ಎನ್ನುವ ಊಹೆ ಮಾಡಿಕೊಂಡು ತಾವು ಕೇವಿಯಟ್ ಹಾಕಿದ್ದರೆ ಈ ಆರ್ಡರ್ ಬರದಂತೆ ತಡೆಯಬಹುದಾಗಿತ್ತು. ಇವೊತ್ತು ಪ್ಲಾನಿಂಗ್ ಕಮಿಶನ್ ಅಪ್ರೂವಲ್ ಪ್ರಕಾರ, ಬಜಾವತ್ ಆಯೋಗದ ತೀರ್ಮಾನದ ಪ್ರಕಾರ 528 ಮೀಟರ್ ಎತ್ತರ ಕಟ್ಟುವುದಕ್ಕೆ ನಾವು ಕಾರ್ಯ ಪ್ರವೃತ್ತರಾಗಿದ್ದೇವೆ, ಏಕೆಂದರೆ ಅದು ನಮ್ಮ ಹಕ್ಕು ಕೂಡ ಆಗಿದೆ. ಇದು ಇಂಟರ್ ಸ್ಟೇಟ್ ಡಿಸ್‌ಪ್ಯೂಟ್ ಆಗಿರುವುದರಿಂದ ಜ್ಯುರಿಸ್‌ಡಿಕ್ಶನ್ ಅವರಿಗೆ ಬರುವುದಿಲ್ಲ ಎಂದು ಬಹಳ ಸ್ಪಷ್ಟವಾಗಿದೆ. ಹಿಂದೆ ಸನ್ಮಾನ್ಯ ನಂಜೇಗೌಡರು ಕಾವೇರಿ ಟ್ರಿಬ್ಯುನಲ್ ಬಗ್ಗೆ ಹೈ ಕೋರ್ಟ್‌ನಲ್ಲಿ ರಿಟ್ ಪಿಟಿಶನ್ ಫೈಲ್ ಆದಾಗ ಅವರು ಸುಪ್ರೀಂ ಕೋರ್ಟಿಗೆ ಹಾಕಿದರು, ಏಕೆಂದರೆ ಜ್ಯುರಿಸ್ ಡಿಕ್ಶನ್ ಬರುವುದಿಲ್ಲ ಎನ್ನುವ ಕಾರಣಕ್ಕೋಸ್ಕರ. ಅದಕ್ಕೋಸ್ಕರ ನಾನು ಒಂದು ಸಲಹೆಯನ್ನು ಕೊಡುತ್ತೇನೆ, ಈ ರಿಟ್ ಪಿಟಿಶನ್ ನಾಟ್ ಮೇನ್‌ಟೇನಬಲ್ ಎಂದು ಹೇಳಿ ಸುಪ್ರೀಂ ಕೋರ್ಟಿಗೆ ನೇರವಾಗಿ ನಾವು ಹೋಗಬಹುದೇ ಎಂಬುದನ್ನು ತಾವು ಪರಿಶೀಲನೆ ಮಾಡಬೇಕು. ಹೈಕೋರ್ಟ್ ಮುಂದೆ ಹೋಗದೇ ಇದನ್ನು ರಿಟ್ ಪಿಟಿಶನ್‌ನ್ನು ವಜಾ ಮಾಡಿ ಎಂದು ಹೋಗುವುದು ಸರಿ ಹೋಗುಬಹುದೇ ಎಂಬ ಬಗ್ಗೆ ಲಾ ಡಿಪಾರ್ಟಮೆಂಟಿನವರನ್ನು ತಾವು ಕನ್‌ಸಲ್ಟ್ ಮಾಡಿ ಬರುವುದು ಒಳ್ಳೆಯದು. ಅಧ್ಯಕ್ಷರೇ, ಒಂದಲ್ಲ ಒಂದು ರೀತಿಯಲ್ಲಿ ಕರ್ನಾಟಕ ರಾಜ್ಯದ ರೈತರಿಗೆ ಕಾವೇರಿ ಬೇಸಿನ್‌ನಲ್ಲಿರುವಂಥರಾಗಿರಬಹುದು, ಕೃಷ್ಣಾ ಬೇಸಿನ್‌ನಲ್ಲಿರುವಂಥವವರಾಗಿರಬಹುದು, ಇವರಿಗೆ ಈ ರೀತಿಯ ಆತಂಕಕಾರಿ ವಿಷಯಗಳೇ ಹೆಚ್ಚಾಗಿ ಬರುತ್ತಿವೆ. ಬಹುಶಃ ಸೂಕ್ಷ್ಮವಾಗಿ